


### ಮಾಹಿತಿಪೂರ್ಣ ಲೇಖನ

ಯಶಸ್ವಿ ಮಹಿಳಾ ರಾಜಕಾರಣಿಗಳ ಬಗ್ಗೆ ಬಿ.ಎಂ.ಹನೀಫ್‌ರ ಮುಖಪುಟ ಲೇಖನ ಸಾಕಷ್ಟು ಮಾಹಿತಿ ನೀಡಿದೆ.

- ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ/ ದೀಪ್ತಿ ಭದ್ರಾವತಿ/ ಸು. ವಿಜಯಲಕ್ಷ್ಮಿ, ಶಿವಮೊಗ್ಗ/ ಕೋಟೇಶ್ವರ ಸೂರ್ಯನಾರಾಯಣರಾವ್, ಜಿ.ಕೆ.ಶ್ರೀಮತಿ, ನೆ.ಲ.ರಾಂ, ಬೆಂಗಳೂರು/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಕಾಡನೂರು ರಾಮಶೇಷ, ಹುಲಿಮಂಗಲ/ ಪಿ.ಗೋವಿಂದರಾಜ್, ತುಮಕೂರು

### ಪುರುಷರಿಗೆ ಮೀಸಲಾತಿ!

ಅಲ್ಲಿ ಮಮತಾ, ಇಲ್ಲಿ ಜಯಲಲಿತ, ದೆಹಲಿಯಲ್ಲಿ ಶೀಲಾ, ಉ.ಪ್ರ.ದಲ್ಲಿ ಮಾಯಾವತಿ. ಪ್ರತಿಭೆಯುಳ್ಳ ಪಾಟೀಲರೇ ನಮ್ಮ ರಾಷ್ಟ್ರಪತಿ. ಹೀಗೆಯೇ ಮುಂದುವರಿದರೆ ಪರಿಸ್ಥಿತಿ– ಪುರುಷರೇ ಕೇಳಬೇಕಾದೀತು ಮೂರನೇ ಒಂದರ ಮೀಸಲಾತಿ!

-ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ

### ಮಾನವೀಯತೆ ಮೆರೆದ ವೈದ್ಯರು

'ಔಷಧಿಗಳು ಏಕೆ ದುಬಾರಿ?' ನಡಹಳ್ಳಿ ವಸಂತ್ ಅವರ ಲೇಖನ ಅರ್ಥಗರ್ಭಿತವಾಗಿದೆ. ಔಷಧಿ ಕಂಪನಿಗಳು ಲಾಭಕ್ಕಿಂತ ಮಾನವೀಯತೆಯನ್ನು ಮೆರೆಯಬೇಕಾಗಿದೆ.

ಬೆಂಗಳೂರಿನಲ್ಲಿ ಅನೇಕ ತಜ್ಞ ವೈದ್ಯರು ಮಾನವೀಯತೆಯಿಂದ ವರ್ತಿಸುತ್ತಿದ್ದಾರೆ. ಆದರೆ ಎಷ್ಟೋ ಸಲ ವೈದ್ಯರಿಗೆ ಯಾವ ಕಂಪನಿಯ ಔಷಧಿ ಕಡಿಮೆ ಬೆಲೆಗೆ ಸಿಗುತ್ತದೆ ಎಂದು ಗೊತ್ತಿರುವುದಿಲ್ಲ. ಆಗ ಮೆಡಿಕಲ್ ಸ್ಟೋರ್‌ನವರನ್ನೇ ಕೇಳಿ ಕಡಿಮೆ ಬೆಲೆಯ ಔಷಧಿ ಕೊಂಡುಕೊಳ್ಳಿ ಎಂದೂ ಸಲಹೆ ಕೊಡುತ್ತಾರೆ. ಇದಕ್ಕಿಂತ ಸಂತೋಷದ ವಿಷಯ ಮತ್ತೇನಿದೆ?

-ಎಸ್. ಪ್ರಕಾಶ, ದೇವನಹಳ್ಳಿ

### ವೈವಿಧ್ಯಮಯ ಪ್ರವಾಸಿ ತಾಣ

'ಬಲ್‌ತಾಲ್'ನ ವೈವಿಧ್ಯತೆಯನ್ನು ಎಸ್.ಪಿ. ವಿಜಯಲಕ್ಷ್ಮಿ ಲೇಖನ ಬಿಡಿಸಿಟ್ಟಿದೆ.

-ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಔಷಧೀಯ ಬಿಳಿ ದಾಸವಾಳ

ದಾಸವಾಳಗಳಲ್ಲಿ ನೂರಾರು ಬಗೆಗಳಿವೆ. ಇತ್ತೀಚೆಗಂತೂ ಕಣ್ಮನ ಸೆಳೆಯುವ ದಾಸವಾಳಗಳ ವೈವಿಧ್ಯಮಯ ತಳಿಗಳು ಬರತೊಡಗಿವೆ. ಆದರೆ ಈ ಎಲ್ಲಾ ಬಗೆಯ ದಾಸವಾಳಗಳ ನಡುವೆ ಔಷಧೀಯ ಬಳಕೆಗಾಗಿ (ಜೊತೆಗೆ ಇಡ್ಲಿ–ದೋಸೆ ತಯಾರಿಯಲ್ಲಿ) ಪಾರಂಪರಿಕ ವೈದ್ಯರು ಬಿಳಿ ದಾಸವಾಳವನ್ನೇ ಶಿಫಾರಸ್ಸು ಮಾಡುವುದುಂಟು. ಬಿಳಿಯ ದಾಸವಾಳವೆಂದರೆ ಮೇ19ರ 'ಸುಧಾ' ನಿಮ್ಮ ಪುಟದಲ್ಲಿ ತೋರಿಸಿದಂತೆ ತೀರಾ ಅಚ್ಚ ಬಿಳುಪಿನ ಬಣ್ಣದ ದಾಸವಾಳವಲ್ಲ. ತಿಳಿ ಹಳದಿ ಬಣ್ಣದ ಹೂವಿನ ದಾಸವಾಳವೇ ವೈದ್ಯರು ಹೇಳುವಂತಹ ಔಷಧೀಯ ಬಿಳಿ ದಾಸವಾಳ.

ಪಾರಂಪರಿಕ ಔಷಧೀಯ ಗುಣವುಳ್ಳ ಬಿಳಿ ದಾಸವಾಳ ತೀರಾ ಅಪರೂಪವೆನ್ನಿಸಿ ಕಣ್ಮರೆಯಾಗತೊಡಗಿದೆ.

-ರವಿಶಂಕರ್ ಪ್ರಸಾದ್, ಪುತ್ತೂರು

### ನೀವು ಕೇಳಿದಿರಿ ಚರ್ವಿತ ಚರ್ವಣ

ನೀವು ಕೇಳಿದಿರಿ ವಿಭಾಗ ಚರ್ವಿತ ಚರ್ವಣವಾಗುತ್ತಿದೆ. ರಾಮ್ ತಾವೇ ಬುದ್ಧಿವಂತರೆಂದು ಭಾವಿಸಿಕೊಂಡು ಲೇವಡಿ ಮಾಡುವ ಮಟ್ಟಕ್ಕೆ ಇಳಿಯುತ್ತಿದ್ದಾರೆಂದು ಅನಿಸುತ್ತಿದೆ.

-ಪ್ರೊ. ರಂಗನಾಥಯ್ಯ, ಭದ್ರಾವತಿ

### ಪ್ರವಚನಕ್ಕೆ ಹಾಸ್ಯ, ಹಾಡು

ಜಾಣರ ಪೆಟ್ಟಿಗೆಯ ಪ್ರತಿಸ್ಪಂದನದಲ್ಲಿ ಇಂದುಮತಿ ಸಾಲಿಮಠ ಅವರೊಂದಿಗೆ ನಾಗು ನಡೆಸಿದ ಸಂದರ್ಶನ ಖುಷಿ ನೀಡಿತು. ಪ್ರವಚನಕ್ಕೆ ಹಾಸ್ಯ, ಹಾಡು ಚಲೋ ಕೂಡತಾವ ಅನ್ನೂ ಅವರ ಮಾತು ಬಾಳ ಹಿಡಿಸ್ತು.

-ರವೀಂದ್ರನಾಥ ಶಿ.ಯಡಹಳ್ಳಿ, ಬೀಳಗಿ

### ಮುದ್ದಣ ಸ್ಮಾರಕ ಕಾವ್ಯ ಪ್ರಶಸ್ತಿ

ಕಾಂತಾವರ ಕನ್ನಡ ಸಂಘವು 2011ನೇ ಸಾಲಿನ ಮುದ್ದಣ ಕಾವ್ಯ ಪ್ರಶಸ್ತಿಗಾಗಿ ಮುದ್ರಣಕ್ಕೆ ಸಿದ್ಧವಾಗಿರುವ ಕವನ ಸಂಗ್ರಹಗಳ ಹಸ್ತಪ್ರತಿಗಳನ್ನು ಸ್ವಾಗತಿಸುತ್ತಿದೆ. ಪ್ರಶಸ್ತಿಯು ತಲಾ ಹತ್ತು ಸಾವಿರ ರೂ. ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದ್ದು, ಆಸಕ್ತರು ರೂ. 5/–ರ ಅಂಚೆ ಚೀಟಿ ಹಚ್ಚಿದ ಸ್ವವಿಳಾಸವಿರುವ ಕವರನ್ನು ಕಳುಹಿಸಿ ಸ್ಪರ್ಧೆಯ ವಿವರಗಳನ್ನು, ಅಧ್ಯಕ್ಷರು, ಕಾಂತಾವರ ಕನ್ನಡ ಸಂಘ, ಅಂಚೆ: ಕಾಂತಾವರ–574129, ಉಡುಪಿ ಜಿಲ್ಲೆ ಇವರಿಂದ ಪಡೆಯಬಹುದು. ವಿವರಗಳನ್ನು ಪಡೆಯುವ ಕೊನೆಯ ದಿನಾಂಕ ಜುಲೈ 15. ಹಸ್ತಪ್ರತಿ ಸ್ವೀಕಾರದ ಕೊನೆಯ ದಿನಾಂಕ: 15 ಆಗಸ್ಟ್ 2011. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 9900701666

## ಸುಧಾ

ರಸಪ್ರಶ್ನೆ ಎಂಟನೇ ಡ್ರಾ (ಮಾರ್ಚ್ 17) ದ ಬಹುಮಾನ ವಿಜೇತರು

fly mobile

ಗೆಲ್ಲಿರಿ!

1. ರುಕಿಯಾ ಭಾನು, ಹಾವೇರಿ
2. ವಾಲ್ಟರ್ ಮಥಾಯಸ್, ಕೊಪ್ಪ
3. ಸರಸ್ವತಿ ಮೂರ್ತಿ, ಬೆಂಗಳೂರು
4. ದೊಡ್ಡಪ್ಪ ಸಿದ್ದಪ್ಪ, ಬೆಳಗಾವಿ
5. ಭಾರತಿ ಎ.ಬಿ., ತುಮಕೂರು
6. ಬಿ.ಎನ್. ವಿನಯಕುಮಾರ್, ಕೋಲಾರ
7. ಸತೀಶ್ ಬಿ.ಇಚ್ಚಂಗಿ, ಹುಬ್ಬಳ್ಳಿ
8. ಕೆ.ಎಸ್. ವಸುಂಧರ, ದೊಡ್ಡಬಳ್ಳಾಪುರ
9. ಶಶಿ ಕುಮಾರ್ ಜಾವಳಿ, ಬಾಗಲಕೋಟೆ
10. ದೊಡ್ಡೇಗೌಡ, ಮಾಗಡಿ

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ಏಳಿಗೆಗಾಗಿ ಕಾರ್ಯ ನಿರ್ವಹಿಸಲು ಸಮಾಜ ಸೇವಕರು ಬೇಕಾಗಿದ್ದಾರೆ. ಇತರ ಸೌಲಭ್ಯಗಳೊಂದಿಗೆ ಉನ್ನತ ಸಂಬಳ ದೊರೆಯುತ್ತದೆ.

ಕಾರ್ಯಕರ್ತರು ಬೇಕಾಗಿದ್ದಾರೆ

ಅಡ್ವಾಂಟೇಜ್ ಫೌಂಡೇಶನ್ ಅಡಿಯಲ್ಲಿನ ಸ್ವಾವಲಂಬಿ ಯೋಜನೆಯಲ್ಲಿ ಕೆಲಸ ಮಾಡಲು ಕಾರ್ಯಕರ್ತರು ಬೇಕಾಗಿದ್ದಾರೆ. ಉನ್ನತ ಸಂಬಳದೊಂದಿಗೆ ಮತ್ತಿತರೇ ಸೌಲಭ್ಯಗಳು ನೀಡಲಾಗುವುದು. ವಿದ್ಯಾರ್ಹತೆ 10ನೇ ತರಗತಿಗಿಂತ ಮೇಲ್ಪಟ್ಟಿರಬೇಕು. ಗ್ರಾಮಾಂತರ ಪ್ರದೇಶದಲ್ಲಿನ ಬಡ ಹೆಣ್ಣುಮಕ್ಕಳಿಗೆ ಉಚಿತ ತರಬೇತಿ ನೀಡಿ ಸಶಕ್ತತೆಯ ಹಾದಿಯಲ್ಲಿ ನಡೆಸುವುದೇ ಸ್ವಾವಲಂಬಿನ ಉದ್ದೇಶ. ಇದಕ್ಕಾಗಿ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸಲು ಕಾರ್ಯಕರ್ತರ ನೇಮಕವನ್ನು ಸಂಸ್ಥೆಯು ಮಾಡಲಾಗುತ್ತಿದೆ. ಆಸಕ್ತಿಯುಳ್ಳವರು ತಮ್ಮ ಪೂರ್ಣ ವಿವರ ಹೊಂದಿದ ಸ್ವ–ವಿವರಣೆ ಪಟ್ಟಿಯನ್ನು ತಮ್ಮ ಭಾವಚಿತ್ರದೊಂದಿಗೆ ಕಳುಹಿಸಿ ಕೊಡತಕ್ಕದ್ದು. ಕಳುಹಿಸಬೇಕಾದ ವಿಳಾಸ.

ಅಡ್ವಾಂಟೇಜ್ ಸೀನಿಯರ್ಸ್ ಫೌಂಡೇಶನ್

# 216/ಬಿ, 6ನೇ ಕ್ರಾಸ್, 1ನೇ ಹಂತ, ಇಂದಿರಾನಗರ, ಬೆಂಗಳೂರು-560 038.